


# ಇಂಗ್ಲಿಷ್ ಕಾದಂಬರಿಕಾರ ಅಮಿಶ್ ತ್ರಿಪಾಠಿ ಸಂದರ್ಶನ

**ಸಂದರ್ಶನ: ಸುಕೃತ ಎಸ್.**

ಭಾರತೀಯ ಪುರಾಣಗಳ ಮರುಕಥನದ ಮೂಲಕವೇ 'ಸೆಲೆಬ್ರಿಟಿ ಲೇಖಕ'ನಾಗಿ ಗುರ್ತಿಸಿಕೊಂಡಿರುವ ಅಮಿಶ್ ತ್ರಿಪಾಠಿ ಮುಂಬೈ ಮೂಲದವರು. ಇಂಗ್ಲಿಷ್‌ನಲ್ಲಿ ಅವರು ಬರೆದ ತ್ರಿವಳಿ ಕೃತಿಗಳು ('ದಿ ಇಮ್ಮಾರ್ಟಲ್ಸ್ ಆಫ್ ಮೆಲುಹ', 'ದಿ ಸೀಕ್ರೆಟ್ ಆಫ್ ದಿ ನಾಗಾಸ್', 'ದಿ ಓತ್ ಆಫ್ ದಿ ವಾಯುಪುತ್ರಾಸ್') 'ಶಿವಾಸ್ ಟ್ರಯಾಲಜಿ' ಎಂದೇ ಪ್ರಸಿದ್ಧವಾಗಿವೆ. 'ರಾಮಚಂದ್ರ ಸೀರೀಸ್'ನಲ್ಲಿ 'ಸಿಯಾನ್ ಆಫ್ ಇಕ್ವಾಕು', 'ಸೀತಾ: ವಾರಿಯರ್ ಆಫ್ ಮಿಥಿಲಾ' ಎಂಬೆರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇದೇ ಸರಣಿಯ ಮುಂದಿನ ಕೃತಿ 'ರಾವಣ: ಎನಿಮಿ ಆಫ್ ಆರ್ಯಾವರ್ತ' ಇತ್ತೀಚೆಗೆ ಬಿಡುಗಡೆಯಾಗಿದೆ. ಅಮಿಶ್ ಅವರ ಕೃತಿಗಳು ಲಕ್ಷಗಟ್ಟಲೆ ಮಾರಾಟವಾಗುತ್ತವೆ, ಹಲವು ಭಾಷೆಗಳಿಗೆ ಭಾಷಾಂತರಗೊಳ್ಳುತ್ತವೆ. ರಾವಣನ ಕುರಿತ ಕೃತಿ 19 ಭಾಷೆಗಳಲ್ಲಿ ಪ್ರಕಟವಾಗಿ 50 ಲಕ್ಷ ಪ್ರತಿಗಳು ಮಾರಾಟವಾಗಿವೆ. 2012 ಮತ್ತು 2013ರಲ್ಲಿ ಭಾರತದ ಟಾಪ್ 100 ಸೆಲೆಬ್ರಿಟಿಗಳ ಪಟ್ಟಿಯಲ್ಲಿ ಅಮಿಶ್ ಸ್ಥಾನ ಪಡೆದಿದ್ದರು. ಬರಹವನ್ನೇ ವೃತ್ತಿಯನ್ನಾಗಿಸಿಕೊಂಡಿರುವ ಅವರು, 'ಪರಂಪರೆಯ ಮರುಕಥನ ಪುಣ್ಯದ ಕೆಲಸ' ಎಂದು ನಂಬಿದ್ದಾರೆ. ಅವರು 'ಮಯೂರ'ಕ್ಕೆ ನೀಡಿರುವ ವಿಶೇಷ ಸಂದರ್ಶನ ಇಲ್ಲಿದೆ.

## ನಾನು ಹಿಂದಿಯಲ್ಲೂ ಬರೆಯಬಹುದು, ಆದರೆ ಇಂಗ್ಲಿಷ್‌ನಲ್ಲೇ ಬರೆಯುತ್ತೇನೆ...